# ಕರ್ನಾಟಕ ಲೋಕಾಯುಕ್ತ

8651

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-8651/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:13-10-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ.ಹೆಚ್.ಎಸ್.ವಿಶ್ವವರುಣ ತಂದೆ ಹೆಚ್.ಬಿ. ಸತ್ಯನಾರಾಯಣ, ತಾಲ್ಲೂಕು ಅಧ್ಯಕ್ಷರು, ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ನಿರ್ಮೂಲನ ಸಮಿತಿ, ಬುದ್ಧ ಮಾರ್ಗ, 1ನೇ ಕ್ರಾಸ್, ವಿದ್ಯಾನಗರ ಹಾಸನ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ.ಹೆಚ್.ಎಸ್.ವಿಶ್ವವರುಣ ತಂದೆ ಹೆಚ್.ಬಿ. ಸತ್ಯನಾರಾಯಣ, ತಾಲ್ಲೂಕು ಅಧ್ಯಕ್ಷರು, ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ನಿರ್ಮೂಲನ ಸಮಿತಿ, ಬುದ್ಧ ಮಾರ್ಗ, 1ನೇ ಕ್ರಾಸ್, ವಿದ್ಯಾನಗರ ಹಾಸನ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, 6ನೇ ಉಪ ವಿಭಾಗ, ಆರ್.ಸಿ. ರಸ್ತೆ, ಹಾಸನ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಹಾಸನದ ಬಂದಿಖಾನೆ ಹಿಂಬಾಗದಲ್ಲಿ ಮತ್ತು ಹೊಳೆನರಸೀಪುರದಲ್ಲಿ ಮಳಿಗೆಗಳನ್ನು ನಿರ್ಮಿಸಿರುತ್ತಾರೆ. ಇವುಗಳನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಲಿ ವತಿಯಿಂದ 2000-2015 ರವರೆಗೆ ನಿರ್ಮಿಸಿದ್ದು ಮಾರ್ಚ್ 2015ರವರೆಗೆ ಕೇವಲ ಶೇ 13ರಷ್ಟು ಮಾತ್ರ ಬಾಡಿಗೆ ವಸೂಲಿ ಮಾಡಿದ್ದು ಉಳಿದ ಶೇ 87ರಷ್ಟು ವಸೂಲಿ ಮಾಡದೆ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹಾಸನದ ಬಂದಿಖಾನೆ ಹಿಂಬಾಗದಲ್ಲಿ 5 ಅಂಗಡಿ ಮಳಿಗೆಗಳು ಮತ್ತು ಹೊಳೆನರಸೀಪುರ ಪಟ್ಟಣದಲ್ಲಿ 7, ಗಾಂಧಿನಗರ ಕೊಳಚೆ ಪ್ರದೇಶದಲ್ಲಿ ಹಿಗೆ ಒಟ್ಟು 10 ಅಂಗಡಿ ಮಳಿಗೆಗಳು ನಿರ್ಮಾಣ ಮಾಡಲಾಗಿದೆ. ಹಾಸನದ 3 ಅಂಗಡಿ ಮಳಿಗೆಗಳನ್ನು ಹರಾಜು ಪ್ರಕ್ರಿಯೆಯಲ್ಲಿ ಪಡೆದಿದ್ದು ಬಿಡ್ಡುದಾರರು ಅಂಗಡಿ ಮಳಿಗೆಗಳನ್ನು

26

ತೆರೆದಿಲ್ಲ ಏಕೆಂದರೆ ಅವರಿಗೆ ವ್ಯಾಪಾರವಾಗಿಲ್ಲ ಅಂತ ಬಾಗಿಲು ತೆರೆದಿರುವುದಿಲ್ಲ. ಉಳಿದ 2 ಮಳಿಗೆಗಳನ್ನು ಗುಜರಿ ವ್ಯಾಪಾರಿಗಳಿಗೆ ಕೊಟ್ಟಿದ್ದು ಅವರು ಅರ್ಧ ಬಾಡಿಗೆ ಕೊಟ್ಟಿದ್ದಾರೆ. ನೋಟೀಸು ನೀಡಿದರು ಪ್ರಯೋಜನವಾಗಿಲ್ಲ. ಅಂಗಡಿಗೆ ಬೀಗ ಹಾಕಲಾಗಿದೆ. ಹೊಸ ಟೆಂಡರ್ ಪ್ರಕ್ರಿಯೆ ಮಾಡುವುದನ್ನು ಮೇಲಾಧಿಕಾರಿಗಳಿಗೆ ನೀಡಲಾಗಿದೆ. ಬಾಕಿ ವಸೂಲಾತಿಗೆ ನೋಟೀಸುಗಳನ್ನು ಕೊಡಲಾಗಿದೆ. 10 ಅಂಗಡಿಗಳಲ್ಲಿ ಕೇವಲ 4 ಅಂಗಡಿಗಳನ್ನು ಮಾತ್ರ ಹಂಚಿಕೆ ಮಾಡಲಾಗಿದೆ ಉಳಿದಂತೆ 6 ಅಂಗಡಿಗಳಿಗೆ ಬಿಡ್ ದಾರರು ಬರಲಿಲ್ಲ ಆದ್ದರಿಂದ ಖಾಲಿ ಇರುತ್ತದೆ. 4 ಅಂಗಡಿಯ ಮಾಲೀಕರು ಬಾಡಿಕೆ ಕೊಟ್ಟಿಲ್ಲ ಆದ್ದರಿಂದ ಒಪ್ಪಂದ ರದ್ದುಪಡಿಸಿ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಅಂತ ತಿಳಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ, ಆದರೆ ದೂರುದಾರರು ಇದುವರೆಗೂ ಯಾವುದೇ ಪ್ರತ್ಯುತ್ತರ ಸಲ್ಲಿಸಿಲ್ಲ.

5. ಎದುರುದಾರರು ಹೊಳೆನರಸೀಪುರ ಮತ್ತು ಹಾಸನ ಅಂಗಡಿಗಳನ್ನು ಹರಾಜು ಪ್ರಕ್ರಿಯೆ ಮೂಲಕ ಬಿಡ್ಡುದಾರರಿಗೆ ಕೊಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ ಕೇವಲ ಅಂಗಡಿಯ ಮಾಲೀಕರುಗಳಿಗೆ ಕೊಟ್ಟಿರುವ ನೋಟೀಸು ಪ್ರತಿಗಳನ್ನು ಮಾತ್ರ ಹಾಜರುಪಡಿಸಿದ್ದಾರೆ. ಇಷ್ಟು ದಿನ ಮಳಿಗೆಗಳನ್ನು ಹರಾಜು ಪ್ರಕ್ರಿಯೆ ಬಿಡ್ಡುದಾರರಿಗೆ ಕೊಡಲು ಏನು ಕ್ರಮ ವಹಿಸಿದ್ದಾರೆ ಎನ್ನುವುದು ತಿಳಿದು ಬರುತ್ತಿಲ್ಲ ಆದ್ದರಿಂದ ಗೌರವಾನ್ವಿತರ ಆದೇಶದಂತೆ ಎದುರುದಾರರಿಗೆ ಕಾನೂನಿನಂತೆ ಎಷ್ಟು ಸಲ ಅಂಗಡಿ ಮಳಿಗೆಗಳನ್ನು ಹರಾಜು ಹಾಕುವ ಪಕ್ರಿಯೆ ನಡೆದಿದೆ ಎನ್ನುವ ಬಗ್ಗೆ ಮತ್ತು ಬಾಕಿ ಉಳಿದ ಬಾಡಿಗೆಯನ್ನು ವಸೂಲಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಬಗ್ಗೆ ವರದಿ ಸಲ್ಲಿಸಲು ನಿರ್ದೇಶಿಸಲಾಗಿತ್ತು.

6. ಎದುರುದಾರರು ತಮ್ಮ ವರದಿಯನ್ನು ಸಲ್ಲಿಸಿದ್ದು, ಒಂದು ಸಲ ಹರಾಜು ಪ್ರಕ್ರಿಯೆ ನಡೆದಿದೆ, ಜಿಲ್ಲಾ ಬಂದಿಖಾನೆ ಹಿಂಭಾಗದಲ್ಲಿ 5 ಅಂಗಡಿ ಮಳಿಗೆಗಳು ಹೊಳೆನರಸಿಪುರದಲ್ಲಿ 4 ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ. ಬಿಡ್ಡುದಾರರು ಬಾರದ ಕಾರಣ ಗಾಂಧಿನಗರ ಪ್ರದೇಶ ಮತ್ತು ಸರ್ವೆ ನಂ.60 ರಲ್ಲಿ ನಿರ್ಮಿಸಿರುವ ಅಂಗಡಿಗಳ ಮರುಹಂಚಿಕೆ ಮಾಡಲು ಪತ್ರವ್ಯವಹಾರ ಮಾಡಲಾಗಿದೆ ಅಂತ ನಮೂದಿಸಿದ್ದೇನೆ.

7. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ತಾವು ನಡೆಸಿರುವ ಹರಾಜು ಪ್ರಕ್ರಿಯೆ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದರೆ

Z—2

ಈಗಾಗಲೇ ಬಾಡಿಗೆಗೆ ಇರುವವರಿಂದ ಹಣ ವಸೂಲಾತಿಗಾಗಿ ನೋಟಿಸ್‌ಗಳನ್ನು ಕೊಟ್ಟಿದ್ದಾರೆ. ಅಂಗಡಿ ಮಳಿಗೆಗಳನ್ನು ಮರುಹಂಚಿಕೆ ಮಾಡಲು ಕ್ರೇಂದ್ರ ಕಛೇರಿಯು ಅನುಮತಿಸಬೇಕಾಗಿರುವುದರಿಂದ, ಎದುರುದಾರರೇ ಮಳಿಗೆಗಳನ್ನು ಹರಾಜಿಗೆ ಹಾಕುವಲ್ಲಿ ನಿರ್ಧಾರ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ, ಹಾಸನ ಜಿಲ್ಲಾ ಬಂದಿಖಾನೆಯ ಹಿಂಭಾಗದಲ್ಲಿರುವ ಅಂಗಡಿ ಮಳಿಗೆಗಳು ಮತ್ತು ಹೊಳೆನ್ನರಸೀಪುರದಲ್ಲಿ ಇರುವ ಅಂಗಡಿ ಮಳಿಗೆಗಳನ್ನು ಮರುಹಂಚಿಕೆ ಮಾಡಲು ಸೂಕ್ತ ಕಾನೂನಿನ ಕ್ರಮವನ್ನು ತಕ್ಷಣ ತೆಗೆದುಕೊಳ್ಳಲು ಸೂಚಿಸಿ, ಬಾಕಿ ಇರುವ ಬಾಡಿಗೆಯ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಡಿಯಲ್ಲಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/10/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ

27